ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 240-243
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ‘ನೆಲದ ಜೋಗುಳ’ – ಒಂದು ವಿವೇಚನೆ

**ಸುನೀತ ಎನ್**

ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ,  ಮೈಸೂರು.

***Abstract:***

*ಕನ್ನಡ ದಲಿತ–ಬಂಡಾಯ ಸಾಹಿತ್ಯದಲ್ಲಿ ಒಂದು ವಿಶಿಷ್ಟವಾದ ವ್ಯಕ್ತಿತ್ವ ಹಾಗೂ ಧೋರಣೆಯ ಅಪರೂಪದ ಕವಿ ಮುಳ್ಳೂರು ನಾಗರಾಜು. ಬಡತನ, ಹಸಿವು, ಅವಮಾನ, ಸಂಕಟಗಳ ಜೊತೆಗೆ ಬದುಕುತ್ತಲೇ ಸೃಜನಶೀಲ ಕಾವ್ಯಕ್ಕಾಗಿ ತವಕಿಸಿದವರು. ಶೋಷಿತ ಪರಂಪರೆಯ ಪ್ರತಿರೋಧದ ಅಸ್ಮಿತೆಯ ನೆಲೆಗಳನ್ನು ಸಾಮಾಜಿಕ ಹೋರಾಟಗಳಲ್ಲಿ ಕಂಡುಕೊಂಡ ಮುಳ್ಳೂರು ನಾಗರಾಜು ಅವರು ವಿದ್ಯಾರ್ಥಿ ದೆಸೆಯಿಂದಲೂ ಕರ್ನಾಟಕ ‘ದಲಿತ ಸಂಘರ್ಷ ಸಮಿತಿ’ಯನ್ನು ಕಟ್ಟಿ ಬೆಳೆಸಿದವರಲ್ಲಿ ಇವರು ಒಬ್ಬರಾಗಿದ್ದಾರೆ. ಸಂಘಟನೆ, ಹೋರಾಟ, ಬರಹ ಈ ಎಲ್ಲ ಕ್ಷೇತ್ರಗಳಲ್ಲಿ ಸಮನ್ವತೆಯನ್ನು ಸಾಧಿಸುತ್ತಾ, ಬರಹಕ್ಕೆ ತಮ್ಮನ್ನು ಒಡ್ಡಿಕೊಳ್ಳುತ್ತ, ತಮ್ಮದೇ ಆದ ವಿಶಿಷ್ಟ ಜಾಡಿನಲ್ಲಿ ಬರಹದ ಜಾಡನ್ನು ಕಂಡುಕೊಂಡವರು. ಕವಿ, ಕಥೆಗಾರ, ಕಾದಂಬರಿಕಾರ ಹಾಗೂ ಆತ್ಮಕಥನಕಾರರು ಹೌದು. ತಮ್ಮ ಬದುಕಿನ ಜಂಜಾಟಗಳ ನಡುವೆಯೇ ಬರಹವನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮಕ್ಕೆ ದುಡಿಸಿಕೊಂಡ ಮಹತ್ವದ ಬರಹಗಾರರಾಗಿದ್ದಾರೆ. ಮುಳ್ಳೂರು ನಾಗರಾಜು ಅವರ ಕೃತಿಗಳು ದಲಿತ ಕೇರಿಯ ಕನವರಿಕೆಗಳನ್ನು ತಮ್ಮ ‘ನೆಲದ ಜೋಗುಳ’ (1993), ‘ಏಕಾಂಗಿ ಏಕಲವ್ಯ’ (2007) ಎಂಬ ಮಹಾಕಾವ್ಯಗಳಲ್ಲಿ ‘ಮರಣ ಮಂಡಲ ಮಧ್ಯದೊಳಗೆ (1986), ‘ದಂಡಕಾರಣ್ಯ’ (2000) ಕಾದಂಬರಿಗಳು, ‘ದಾಖಲೆ’ (1987), ‘ಹೊಲೆಯೂರು’, ‘ಸಾವಕಾಲದ ಹಕ್ಕಿ’ ಕವನ ಸಂಕಲನ, ‘ಸಿಂಗಳೀಕ’ (2002) ಕಥಾಸಂಕಲನ, ಕೃತಿಗಳಲ್ಲಿ ಕಟ್ಟಿಕೊಟ್ಟಿದ್ದಾರೆ.*

**Keywords:** *ಕನ್ನಡ ಸಾಹಿತ್ಯ, ಮುಳ್ಳೂರು ನಾಗರಾಜು, ನೆಲದ ಜೋಗುಳ, ಮಹಾಕಾವ್ಯ.*

## ಪೀಠಿಕೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸುದೀರ್ಘವಾದ ಮಹಾಕಾವ್ಯ ಪರಂಪರೆಯ ಪ್ರಾಚೀನ ಮಹಾಕವಿ ಪಂಪನಾದಿಯಾಗಿ ಆಧುನಿಕ ರಾಷ್ಟ್ರಕವಿ ಕುವೆಂಪು ತರುವಾಯದಲ್ಲಿಯೂ ಮಹಾಕಾವ್ಯದ ರಚನೆ ವಿಸ್ತಾರಗೊಳ್ಳುತ್ತಲೇ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ. ಕನ್ನಡದ ಶ್ರೀಮಂತ ಮಹಾಕಾವ್ಯ ಪರಂಪರೆಯ ಹರಹನ್ನು ಮುಳ್ಳೂರರು ತಮ್ಮ ‘ನೆಲದ ಜೋಗುಳ’, ‘ಏಕಾಂಗಿ ಏಕಲವ್ಯ’ ಮಹಾಕಾವ್ಯಗಳ ಮೂಲಕ ವಿಸ್ತರಿಸಿದ್ದಾರೆ. ಹಾಗೆಯೇ ಆಧುನಿಕ ಕನ್ನಡ ದಲಿತ ಸಾಹಿತ್ಯ ಪರಂಪರೆಯಲ್ಲಿ ಮಹಾಕಾವ್ಯವನ್ನು ರಚಿಸಿದ ಮೊದಲ ದಲಿತ ಕವಿ ಇವರಾಗಿದ್ದಾರೆ.

‘ನೆಲದ ಜೋಗುಳ’ ಮಹಾಕಾವ್ಯ ಒಂದು ಮಹತ್ವಾಕಾಂಕ್ಷೆಯ ಹಿನ್ನೆಲೆಯಲ್ಲಿ ರಚಿತಗೊಂಡಿದ್ದು ಪ್ರಾಚೀನ ಮಹಾಕಾವ್ಯಗಳ ಎಲ್ಲ ಮಾನದಂಡಗಳನ್ನು ಸರಿಸಿ ತಂತಾನೆ ಸಂಭವಿಸಿದ ಮಹಾಕಾವ್ಯವಿದು. ಗತಕಾಲದ ಬದುಕಿನ ಜೊತೆಗೆ ಆಧುನಿಕ ಒಳನೋಟಗಳನ್ನು ಒಳಗೊಂಡ ಈ ಮಹಾಕಾವ್ಯದ

***Please cite this article as:*** ಸುನೀತ ಎನ್. (2025). ‘ನೆಲದ ಜೋಗುಳ’ – ಒಂದು ವಿವೇಚನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(3), 240–243

ನೆಲೆ ಕಾಲದೊಡನೆ ಸ್ಪರ್ಧಿಸುತ್ತಿರುವ ದಲಿತ ಬದುಕನ್ನು ಕುರಿತದ್ದಾಗಿದೆ. ಆ ಕಾರಣದಿಂದಾಗಿ ಇದು 'ನೆಲದ ಜೋಗುಳ' ಈ ಜೋಗುಳವು ಕಾಲಾತೀತವಾದದ್ದು ಎನ್ನುವುದು ಕವಿಯ ಅಭಿಮತವಾಗಿದೆ.

ಇಪ್ಪತ್ತು ಗರಿಗಳನ್ನು ಒಳಗೊಂಡಿರುವ 'ನೆಲದ ಜೋಗುಳ' ಮಹಾಕಾವ್ಯದ ವಸ್ತು 'ರಾಮಾಯಣ' ಮಹಾಕಾವ್ಯದಲ್ಲಿ ಬರುವ 'ಶಂಬೂಕ ವಧೆ' ಪ್ರಸಂಗವನ್ನು ಆಧರಿಸಿದೆ. ಶಂಬೂಕನೆಂಬ ಶೂದ್ರ ವರ್ಗದವನು ತಪಸ್ಸಿಗೆ ಕುಳಿತಿರುವುದು ಹಿಂದೂ ಧರ್ಮದ ವರ್ಣಾಶ್ರಮ ವ್ಯವಸ್ಥೆಗೆ ವಿರುದ್ಧವಾದದ್ದು ಎಂದು ಬ್ರಾಹ್ಮಣನೊಬ್ಬನ ಆರೋಪವಾಗಿದೆ. ಶಂಬೂಕನ ತಪಸ್ಸಿನಿಂದಾಗಯೇ ತನ್ನ ಮಗನ ಮರಣ ಸಂಭವಿಸಿತು ಎಂದು ರಾಮನಲ್ಲಿಗೆ ಹೋಗಿ ಅವನು ದೂರು ನೀಡುತ್ತಾನೆ. ಬ್ರಾಹ್ಮಣನ ಈ ದೂರಿನನ್ವಯ ರಾಮನು ಬಂದು ತನ್ನಷ್ಟಕ್ಕೆ ತಾನು ತಪಸ್ಸಿನಲ್ಲಿ ಮಗ್ನನಾಗಿದ್ದ ಶಂಬೂಕನ ತಲೆಯನ್ನು ಕತ್ತರಿಸುತ್ತಾನೆ. ವರ್ಣಾಶ್ರಮ ಧರ್ಮವನ್ನು ಸಂರಕ್ಷಿಸಿದನೆಂದು ದೇವತೆಗಳು ಮೇಲಿನಿಂದ ರಾಮನ ಮೇಲೆ ಹೂವುಗಳನ್ನು ಸುರಿಸುತ್ತಾರೆ. ಇದು ಮೂಲ ರಾಮಾಯಣದಲ್ಲಿ ಬರುವ ಶಂಬೂಕ ಪ್ರಸಂಗ.

ರಾಜಶಾಹಿ ಪ್ರಭುತ್ವವನ್ನು ಬಿಂಬಿಸುವ 'ರಾಮಾಯಣ' ಮಹಾಕಾವ್ಯದಲ್ಲಿ ಜನಸಾಮಾನ್ಯರ ಬದುಕಿನ ಚಿತ್ರಣ ಸಿಗುವುದು ತೀರಾ ಅಪರೂಪ ಸಿಕ್ಕರೂ ಅವರು ಶಂಬೂಕ ಪಾತ್ರದಲ್ಲಿ ಸಮ್ಮಿಳಿತಗೊಂಡಿದೆ. ಇದೇ ಪ್ರಸಂಗವನ್ನು ಕುವೆಂಪು ಅವರು 'ಶೂದ್ರತಪಸ್ವಿ' ಎಂಬ ನಾಟಕವನ್ನು ರಚಿಸಿ ಶೂದ್ರತ್ವಕ್ಕೆ ಒಗ್ಗಿಸಿಕೊಂಡರೆ, ಮುಳ್ಳೂರರು ದಲಿತತ್ವಕ್ಕೆ ಒಗ್ಗಿಸಿಕೊಂಡು ಮಹಾಕಾವ್ಯವನ್ನು ರಚಿಸಿದ್ದಾರೆ. 'ಶೂದ್ರತಪಸ್ವಿ'ಯಲ್ಲಿ ರಾಮನ ವ್ಯಕ್ತಿತ್ವಕ್ಕೆ ಕಿಂಚಿತ್ತು ಕಳಂಕವಿಲ್ಲ. ಆದರೆ 'ನೆಲದ ಜೋಗುಳ'ದಲ್ಲಿ ರಾಮನೆ ಖಳನಾಯಕ "ಜನವಿರೋಧಿ ಸಂಸ್ಕೃತಿ ಮತ್ತು ಜನಪರ ಸಂಸ್ಕೃತಿಗಳ ನಡುವಣ ಸಂಘರ್ಷ. ಸಾಂಪ್ರದಾಯಿಕ ಮನೋಧರ್ಮದ ವಿರುದ್ಧದ ತೀವ್ರ ಬಂಡಾಯ ನನ್ನ ಕವಿತೆಯ ವಸ್ತು. ರಾಮನೆಂಬ ದೇವರಿಗೂ ನನ್ನ ಕಾವ್ಯದ ರಾಮನಿಗೂ ಯಾವ ಸಂಬಂಧವೂ ಇಲ್ಲ. ಆದಿಕವಿ ವಾಲ್ಮೀಕಿಯ ಕಾವ್ಯನಾಯಕನಾದ ರಾಮನು ನನ್ನ ಕಾವ್ಯದಲ್ಲಿ ಖಳನಾಯಕನಾಗಿರವನು. ದಲಿತ ಜೀವನದ ನೆಲೆಯಲ್ಲಿ ರಾಮನನ್ನು ನೋಡಿದಾಗ ಆತನಿಗೆ ನಾಯಕತ್ವದ ಯಾವ ಗುಣವೂ ಇರುವಂತೆ ಕಾಣಸಿಗುವುದಿಲ್ಲ. ಕೊಲೆಗಾರ ಎಷ್ಟೇ ದೊಡ್ಡವರಾದರೂ ನನ್ನ ಪಾಲಿಗೆ ಸಮಾಜ ಕಂಟಕರಾಗಿಯೇ ಕಾಣಿಸುತ್ತಾರೆ. ರಾಮನಂತೂ ದಲಿತರ ಕೊಲೆಗಳ ಉದ್ಘಾಟಕನಂತೆ ಕಾಣಿಸುತ್ತಾನೆ"[1] ಎಂದಿದ್ದಾರೆ ಕವಿ.

ಪ್ರಭುತ್ವವು ಎಲ್ಲ ಕಾಲದಲ್ಲಿಯೂ ತನ್ನ ಅಧೀನಕ್ಕೆ ಒಳಪಟ್ಟವರ ಮೇಲೆ ವಿವಿಧ ರೀತಿಗಳಲ್ಲಿ ಅಧಿಕಾರವನ್ನು ಚಲಾಯಿಸುವ ಒಂದು ವ್ಯವಸ್ಥಿತ ಶಕ್ತಿ. ಇದು ಸರ್ವವ್ಯಾಪಕವು ಅನಿರ್ಬಂಧಿತವೂ ಆದ ಶಕ್ತಿಯಾಗಿದೆ. ಈ 'ನೆಲದ ಜೋಗುಳ'ದಲ್ಲಿ ರಾಮ ಶಂಬೂಕನ ಮೇಲೆ ನಡೆಸಿದ ಅಧಿಕಾರವು ಪ್ರಭುತ್ವ ಹಿಂಸೆಯಾಗಿದೆ. ಹಾಗೂ ಇಲ್ಲಿ ಸರ್ವ ವಿಧದಲ್ಲೂ ವರ್ಣಾಶ್ರಮ ವ್ಯವಸ್ಥೆಯ ಪ್ರತಿಪಾದಕನಂತೆ ಅದರ ಸಂರಕ್ಷಕನಂತೆ ಕಂಡುಬರುತ್ತಾನೆ. ತನ್ನ ಸಾಮ್ರಾಜ್ಯದಲ್ಲಿ ಬದುಕುವ ಪ್ರತಿಯೊಬ್ಬ ಪ್ರಜೆಯನ್ನು ಸಮಾನ ದೃಷ್ಟಿಯಲ್ಲಿ ನೋಡುವುದು ರಾಜನಾದವನ ಕರ್ತವ್ಯ. ಆತನಿಗೆ ತಾಯ್ತನದ ಅಂತಃಕರಣವಿರಬೇಕು. ಆದರೆ ರಾಮನಲ್ಲಿ ಆ ಬಗೆಯ ಗುಣಗಳು ಯಾವುದು ಗೋಚರಿಸುವುದಿಲ್ಲ. ದಲಿತತ್ವದ ಪ್ರತಿನಿಧಿಯಾದ ಶಂಬೂಕ ಜಾತಿವ್ಯವಸ್ಥೆ, ಧರ್ಮ, ಪ್ರಭುತ್ವ, ಪೌರೋಹಿತ್ಯ ಹಾಗೂ ಸರ್ವಾಧಿಕಾರವನ್ನು ತೀವ್ರವಾಗಿ ಪ್ರಶ್ನಿಸುತ್ತಾನೆ. ಆದರ್ಶ, ಆಧ್ಯಾತ್ಮ, ದೈವತ್ವದ ಮುಖವಾಡಗಳನ್ನು ಈ ಮಹಾಕಾವ್ಯ ಬಯಲಿಗೆಳೆಯುತ್ತದೆ. ಶೋಷಿತರ ಬದುಕಿನ ಪ್ರತಿರೋಧದ ನೆಲೆಗಳು ಈ ಕಾವ್ಯದುದ್ದಕ್ಕೂ ತಬ್ಬಲಿತನಕ್ಕೆ ಒಳಗಾದ ದಲಿತ ಸಮುದಾಯಕ್ಕೆ

ಸ್ವಾಭಿಮಾನದ ಅರಿವಿನ ಎಚ್ಚರ ಮಾಡುವಂತಾಗಬೇಕು ಎಂಬುದು ಕಾವ್ಯದ ಮೂಲ ಆಶಯವಾಗಿದೆ.

ಈ ಮಹಾಕಾವ್ಯವನ್ನು ಕುರಿತು ಅಪ್ಪಗೆರೆ ಸೋಮಶೇಖರ್ ಅವರು "ಎಲ್ಲಾ ಬಗೆಯ ಹಕ್ಕು ಅಧಿಕಾರಗಳನ್ನು ಪಟ್ಟಭದ್ರ ಹಿತಾಸಕ್ತಿಯ ಕಪಿಮುಷ್ಠಿಯಿಂದ ಬಿಡುಗಡೆಗೊಳಿಸಿ ವಿಕೇಂದ್ರಿಕರಣದ ಮೂಲಕ ಎಲ್ಲ ಸಮುದಾಯಗಳಿಗೆ ಪ್ರಾತಿನಿಧ್ಯವನ್ನು ಕಲ್ಪಿಸುವ ಸಮಸಮಾಜದ ವ್ಯವಸ್ಥೆ ನಿರ್ಮಾಣವಾಗಬೇಕೆಂಬ ಸಾಮಾಜಿಕ ನ್ಯಾಯ ಸಿದ್ಧಾಂತವನ್ನು ಈ ಕಾವ್ಯ ಮಂಡಿಸುತ್ತದೆ"[2] ಎಂದಿದ್ದಾರೆ.

ಅಕ್ಷರದ ಅರಿವಿನ ಪಾಲುದಾರಿಕೆ ಬಯಸಿದ ಶಂಬೂಕನನ್ನು ಹತ್ಯೆಗೈದ ಅಂದಿನ ವ್ಯವಸ್ಥೆಯೇ ಇಂದಿಗೂ ಸಹ ಬೇರೆ ಬೇರೆ ಸ್ವರೂಪದಲ್ಲಿ ಮುಂದುವರೆಯುತ್ತಿದೆ. ಶ್ರೇಷ್ಠ–ಕನಿಷ್ಠ, ಮೇಲು–ಕೀಳಿನ ಮಾನದಂಡಗಳು ಇಂದಿಗೂ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಜೀವಂತವಾಗಿವೆ. ಈ ವ್ಯವಸ್ಥೆಯೇ ದಲಿತರಿಗೆ ಸಿಗಬೇಕಾದ ಸಾಮಾಜಿಕ ನ್ಯಾಯವನ್ನು ನಿರಾಕರಿಸಿ, ಹಕ್ಕು, ಅಧಿಕಾರ ಪ್ರಾತಿನಿಧ್ಯಗಳಿಂದ ವಂಚಿಸುತ್ತಾ ಬಂದಿವೆ. ಮನುಧರ್ಮದ ಜಾತಿವ್ಯವಸ್ಥೆಯ ಕ್ರೌರ್ಯಕ್ಕೆ ಶಂಬೂಕ, ಏಕಲವ್ಯರು ಬಲಿಯಾದಂತೆ ಬಸವಣ್ಣ, ಗಾಂಧಿ, ಬೌದ್ಧಬಿಕ್ಷುಗಳು ಬಲಿಯಾಗಿದ್ದಾರೆ ಎಂಬುದನ್ನು 'ನೆಲದ ಜೋಗುಳ' ಮಹಾಕಾವ್ಯ ಪ್ರಸ್ತುತ ಪಡಿಸುತ್ತದೆ.

'ಬಲಿಪಶುವಾದ ಶಂಬೂಕನಿಗೆ ಈ ನೆಲ ಹೇಗೆ ತಾಯಿಯೋ ಅಂತೆಯೇ ಕೊಲೆಗಾರನಾದ ರಾಮನಿಗೂ ಈ ನೆಲ ತಾಯಿಯೇ' ಇಂತಹ ದಾರ್ಶನಿಕತೆಯನ್ನು ಈ 'ನೆಲದ ಜೋಗುಳ'ವು ಒಳಗೊಂಡಿದೆ. ದಲಿತತ್ವದ ಎಲ್ಲೆಯನ್ನು ಮೀರಿ ಕಾವ್ಯ ವಿಸ್ತರಿಸಿಕೊಂಡಿದೆ. ಇಬ್ಬರಿಗೂ ಒಂದೇ ನೆಲವಾದರೂ ಸಾಂಸ್ಕೃತಿಕವಾಗಿ ಇವರ ನಡುವೆ ಎಷ್ಟು ವ್ಯತ್ಯಾಸವಿದೆ. ಒಂದು ಕೊಲ್ಲುವ ಸಂಸ್ಕೃತಿ, ಇನ್ನೊಂದು ತಣಿಸುವ ಸಂಸ್ಕೃತಿ, ಕೊಲೆಯ ಆಚೆಗೂ ನಾನು ವಿಸ್ತರಿಸಿಕೊಳ್ಳುತ್ತೇನೆ ಎಂಬ ಶಂಬೂಕನ ಪ್ರತಿರೋಧ ಮತ್ತು ಜೀವಂತಿಕೆಯ ದನಿಯಾಗಿ ಈ ನೆಲದಲ್ಲಿ ಮತ್ತೆ ಮತ್ತೆ ಪ್ರತಿಧ್ವನಿಸುತ್ತಲೇ ಇರುತ್ತದೆ.

ಭಾರತ ನೆಲದ ವೈದಿಕಶಾಹಿ ವರ್ಗವು ಮನುಧರ್ಮಶಾಸ್ತ್ರದ ನೆಲೆಯಿಂದ ರೂಪುಗೊಂಡಿರುವಂತಹದ್ದು. ಭಾರತದ ನೆಲದಲ್ಲಿ ಅರಾಜಕತೆ, ಅಸಮಾನತೆಗಳು ನೆಲೆಯೂರಲು ಇಂತಹ ಧರ್ಮಶಾಸ್ತ್ರಗಳ ಕೊಡುಗೆ ಅಪಾರ, ಜಾತ್ಯಾತೀತ ನೆಲೆಗಳ ಒಂದಂಶವೂ ಇಂತಹ ಧರ್ಮಶಾಸ್ತ್ರ ಗ್ರಂಥಗಳಲ್ಲಿ ಕಾಣಸಿಗುವುದಿಲ್ಲ. ಶಂಬೂಕನ ಪ್ರತಿರೋಧವು ಇಂತಹ ಅಮಾನವೀಯತೆಯನ್ನು ಪ್ರತಿಪಾದಿಸುವ ಧರ್ಮಶಾಸ್ತ್ರಗಳು ಹಾಗೂ ಇದನ್ನು ಬೆಂಬಲಿಸುವ ರಾಜಪ್ರಭುತ್ವದ ವಿರುದ್ಧದ ಬಂಡಾಯವಾಗಿ 'ನೆಲದ ಜೋಗುಳ' ಮಹಾಕಾವ್ಯದಲ್ಲಿ ಕಾಣಿಸಿಕೊಂಡಿದೆ.

'ನೆಲದ ಜೋಗುಳ'ದ ಶಂಬೂಕ ಇಂತಹ ಧರ್ಮಶಾಸ್ತ್ರಗಳ ಕ್ರೌರ್ಯದ ವಿರುದ್ಧ 'ಜಾಗದ ರಕ್ತದ ಹೊಳೆಗೆ ಜನ ಜೀವನದ ಕೊಲೆಗೆ ನರಹಿಂಸೆಯ ಮಳೆಗೆ ಜಾತಿಧರ್ಮಗಳ ರಗಳೆಗೆ ನನ್ನ ದಿಕ್ಕಾರ' ಎಂಬ ಬಂಡಾಯವನ್ನು ಹೂಡಿದ್ದಾನೆ. ಅಂತೆಯೇ 'ನೀರು ನೆರಳಾಚೆ ಹಕ್ಕಿಯಾಗಿ ನೆಲದ ಜೋಗುಳ ತುಂಬುವೆ, ಪ್ರೀತಿಯನ್ನು ನಂಬುವೆ! ಬನ್ನಿ ಒಲವಿನೊಂದಿಗೆ ಹೊಲೆಯೂರಿಗೆ ಬನ್ನಿ ನಮ್ಮ ನಿಮ್ಮ ಹೊಲಗೇರಿಗೆ ಪ್ರೀತಿ ಪ್ರೇಮದ ಕೇರಿಗೆ' ಎಂಬ ಶಂಬೂಕನ ಆಪ್ತಧ್ವನಿಗಳು ಹಿಂಸೆಯ ವಿರುದ್ಧ ಸಾರಿದ ಬಂಡಾಯವೇ ಆಗಿದೆ.

"ಜನಸಮುದಾಯದ ಮೇಲೆ ಆದ ಪ್ರಭುತ್ವದ ಪರಿಣಾಮ ಮುಖ್ಯವಾಗಿ ಎರಡು ರೀತಿಯದು. ಒಂದು ಮತ–ಧರ್ಮದ ಹೆಸರಿನಲ್ಲಿ ಎರಡು ರಾಜಸತ್ತೆಯ ಹೆಸರಿನಲ್ಲಿ. ಹೀಗೆ ಪ್ರಭುತ್ವ ಅನೇಕ ಬಗೆಯ ದಬ್ಬಾಳಿಕೆಯನ್ನು ನಡೆಸಿದೆ. ಆರ್ಥಿಕ ಅಸಮಾನತೆಯನ್ನು ಪ್ರತಿಪಾದಿಸುವ ರಾಜಸತ್ತೆಯ ಪ್ರಭುತ್ವದಿಂದ ಕೇಡುಂಟಾಗಿದ್ದರೆ, ಮತ–ಧರ್ಮಗಳನ್ನು ತಮ್ಮ ಅನುಕೂಲಕ್ಕಾಗಿ ಬಳಸಿಕೊಂಡು

ಚಾತುರ್ವರ್ಣ ಪದ್ಧತಿಯನ್ನು, ಬಳಕೆಗೆ ತಂದ ಸನಾತನಿಗಳಿಂದ ಸಾಮಾಜಿಕ, ಸಾಂಸ್ಕೃತಿಕ ಅಸಮಾನತೆ ಹುಟ್ಟಿತು. ರಾಜಸತ್ತೆಯ ಪ್ರಭುತ್ವಕ್ಕಿಂತ, ಮತ–ಧರ್ಮದ ಮೂಲಕ ಈ ದೇಶದ ಪುರೋಹಿತಶಾಹಿ ಸಂಪ್ರದಾಯವಾದಿಗಳು ಶತ–ಶತಮಾನಗಳಿಂದ ನಡೆಸಿರುವ ಯಜಮಾನಿಕೆ ತುಂಬ ಆತಂಕಕಾರಿಯಾದುದಾಗಿದೆ. ಅನೇಕ ಸಲ ರಾಜಪ್ರಭುತ್ವ ಮತ್ತು ಮತ–ಧರ್ಮ ಪ್ರಭುತ್ವಗಳೆರಡೂ ಜೊತೆಜೊತೆಯಾಗಿ ಸಮುದಾಯವನ್ನು ಶೋಷಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಧರ್ಮಗುರುಗಳು, ಪಂಡಿತರು, ಮಠಾಧಿಪತಿಗಳು ಹಾಕಿದ ನಿಯಮಗಳೇ ರಾಜನ ಮೂಲಕ ರಾಜಾಜ್ಞೆಗಳಾಗಿ ರೂಪಿತಗೊಂಡಿರುವುದನ್ನು ಇತಿಹಾಸದುದ್ದಕ್ಕೂ ನೋಡಬಹುದಾಗಿದೆ."[3]

ಭಾರತದ ಸಂದರ್ಭದಲ್ಲಿ ಪ್ರಭುತ್ವವನ್ನು ರಚಿಸುವ ಹಾಗೂ ಅದನ್ನು ಮಾನ್ಯ ಮಾಡುವ ವಿಧಿ–ವಿಧಾನಗಳನ್ನು ಬಹಳ ಹಿಂದಿನಿಂದಲೂ ಪುರೋಹಿತಶಾಹಿ ವರ್ಗ ವ್ಯವಸ್ಥೆಯಾಗಿ ಮಾಡಿಕೊಂಡು ಬಂದಿದೆ. ಪುರೋಹಿತಶಾಹಿ ವರ್ಗ ಒಂದು ಶಕ್ತಿಯುತ ಅಧಿಕಾರ ಕೇಂದ್ರವಾಗಿ ರೂಪುಗೊಂಡಿತ್ತು. ಈ ಎಲ್ಲಾ ಅಂಶಗಳು 'ನೆಲದ ಜೋಗುಳ'ದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ.

'ನೆಲದ ಜೋಗುಳ'ದಲ್ಲಿ 'ನೆಲ' ಎಲ್ಲಾ ಜೀವ ಸಂಸ್ಕೃತಿಯ ಒಡಲು 'ಜೋಗುಳ' ತಾಯ್ತನದ ಪ್ರೀತಿ, ಮಮತೆ, ಕರುಣೆ, ಅಕ್ಕರೆಯ ಸಂಕೇತ. ಇವೆರಡನ್ನೂ ಸೇರಿಸಿ ಹಾಡಿದ 'ನೆಲದ ಜೋಗುಳ' ಮಹಾಕಾವ್ಯವೂ ಕನ್ನಡ ಕಾವ್ಯದಲ್ಲಿ ಒಂದು ವಿಶೇಷ ಅಭಿವ್ಯಕ್ತಿ. ಇಡೀ ದಲಿತ ಕಾವ್ಯ ತತ್ವನೇ 'ನೆಲದ ಜೋಗಳ'ದಲ್ಲಿ ಕಾಣಿಸಿಕೊಂಡಂತಹ ಅನುಭವ ಈ ಮಹಾಕಾವ್ಯದಲ್ಲಿದೆ.

**ಕೊನೆಟಿಪ್ಪಣಿಗಳು**

1. ಮುಳ್ಳೂರು ನಾಗರಾಜು. *ನೆಲದ ಜೋಗುಳದ ಮುನ್ನುಡಿ.* ಪುಟ. 5
2. ಅಪ್ಪಗೆರೆ ಸೋಮಶೇಖರ್ (ಸಂ.) (2019). *ಮುಳ್ಳೂರು ನಾಗರಾಜು ಸಮಗ್ರ ಸಾಹಿತ್ಯ ಸಂಪುಟ–1.* ಕನ್ನಡ ಪುಸ್ತಕ ಪ್ರಾಧಿಕಾರ. ಪುಟ–15
3. ವೆಂಕಟೇಶಮೂರ್ತಿ, ಟಿ. (2019). *ಕನ್ನಡ ನಾಟಕ ಯಾಜಮಾನ್ಯ ಸಂಕಥನ.* ಕಿ.ರಂ. ಪ್ರಕಾಶನಬ. ಪುಟ. 44.